ಯೋಜನೆಗಳನ್ನು ರೂಪಿಸಲು ಇರುವ ಮಾನದಂಡಗಳು

2723 (3626); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

ಅ) ರಾಜ್ಯ ಸರ್ಕಾರವು ಎಲ್ಲಾ ಜಿಲ್ಲೆಗಳಿಗೂ ಅನ್ವಯಿಸುವಂತೆ ಏಕ ರೂಪದ ಯೋಜನೆಗಳನ್ನು ರೂಪಿಸುತ್ತಿದೆಯೇ; ಹಾಗಿದ್ದಲ್ಲಿ, ಈ ಯೋಜನೆಗಳನ್ನು ರೂಪಿಸುವಾಗ ಇಲಾಖೆಯವರು ಅನುಸರಿಸುವ ಮಾನದಂಡಗಳೇನು; ಉದಾಹರಣೆಗೆ ಹಿಂದುಳಿದ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಈಗ 371(ಜೆ) ಅನ್ವಯ ವಿಶೇಷ ಸ್ಥಾನಮಾನ ನೀಡಿರುವುದರಿಂದ ಈ ಭಾಗದ ಜಿಲ್ಲೆಗಳ ಅಭಿವೃದ್ಧಿಗಾಗಿ ಯೋಜನಾ ಇಲಾಖೆಯು ಯಾವ ರೀತಿಯಲ್ಲಿ ಯೋಜನೆಗಳನ್ನು ರೂಪಿಸುವುದು;

ಆ) ಈ ಬಗ್ಗೆ ಅಧ್ಯಯನ ನಡೆಸಲಾಗಿದೆಯೇ; ನಡೆಸಿದ್ದಲ್ಲಿ ಇದರ ವಿವರಗಳೇನು;

ಇ) ರಾಜ್ಯ ಸರ್ಕಾರವು ಯೋಜನೆಗಳನ್ನು ರೂಪಿಸುವ ಮೊದಲು ಅಧ್ಯಯನ ನಡೆಸಲು ಹೊರ ರಾಜ್ಯಕ್ಕೆ ಅಥವಾ ಹೊರದೇಶಕ್ಕೆ ಹೋಗುವುದೇ ಅಥವಾ ತನ್ನದೇ ಮಾನದಂಡಗಳನ್ನು ಅನುಸರಿಸಿ ಯೋಜನೆಗಳನ್ನು ರೂಪಿಸುವುದೇ;

ಈ) ಎಷ್ಟು ಅವಧಿಗೆ ಒಮ್ಮೆ ರಾಜ್ಯ ಸರ್ಕಾರವು ಹೊಸ ಹೊಸ ಯೋಜನೆಗಳನ್ನು ರೂಪಿಸಲಾಗುವುದು?

ಶ್ರೀ ಎಸ್.ಆರ್. ಪಾಟೀಲ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖಾ ಸಚಿವರು)

ಅ) ನಿರ್ದಿಷ್ಟ ಉದ್ದೇಶಗಳ ಮತ್ತು ನಿರೀಕ್ಷಿತ ಫಲಶೃತಿಗಳ ನಿರೀಕ್ಷೆಗಳೊಂದಿಗೆ ಯೋಜನೆಗಳನ್ನು ರೂಪಿಸಲಾಗುವುದು ಗುಂಪು ಮತ್ತು ಪ್ರದೇಶಗಳನ್ನು ಗುರಿಯಾಗಿಟ್ಟುಕೊಂಡು ಮಾನದಂಡಗಳನ್ನು ಅಂತಿಮಗೊಳಿಸಲಾಗುವುದು. ಹೈದ್ರಾಬಾದ್–ಕರ್ನಾಟಕ ಪ್ರದೇಶದ ಸಾಂಸ್ಥಿಕ ಮತ್ತು ಮೂಲಭೂತ

ಸೌಕರ್ಯಗಳ ಹಂತವನ್ನು ಕಡಿಮೆಗೊಳಿಸುವ ಕಾಮಗಾರಿಗಳನ್ನು ಅನುಷ್ಟಾನಿಸಲು, ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿಗೆ **united** ಅನುದಾನವನ್ನು ಸಹ ಒದಗಿಸಲಾಗುತ್ತಿದೆ. ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿಯು ಹೈದ್ರಾಬಾದ್–ಕರ್ನಾಟಕ ಪ್ರದೇಶದ ಅಗತ್ಯತೆಗಳಿಗೆ ಅನುಗುಣವಾಗಿ ಯೋಜನೆಗಳನ್ನು ಗುರುತಿಸುತ್ತದೆ.

ಆ) ಇಲಾಖೆಗಳ ಮೌಲ್ಯಮಾಪನ ಕೆಲಸಕಾರ್ಯಗಳಿಗೆ ಸಹಕಾರ ನೀಡಲು ಮತ್ತು ನಿರಂತರವಾಗಿ ಯೋಜನೆಗಳ ಸ್ವತಂತ್ರ ಮೌಲ್ಯಮಾಪನಕ್ಕಾಗಿ ಸರ್ಕಾರವು "ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ" ಸ್ಥಾಪಿಸಿರುತ್ತದೆ. ಹೊಸ ಯೋಜನೆಗಳನ್ನು ರೂಪಿಸಲು ಮತ್ತು ಪ್ರಸ್ತುತ ಇರುವ ಯೋಜನೆಗಳನ್ನು ಅನುಷ್ಠಾನಗೊಳಿಸುವ ವಿಧಿವಿಧಾನಗಳನ್ನು ಮಾರ್ಪಡಿಸುವಾಗ, ಮೌಲ್ಯಮಾಪನದಿಂದ ಹೊರಹೊಮ್ಮುವ ಅಂಶಗಳೊಂದಿಗೆ, ಸಾರ್ವಜನಿಕರ, ಅನುಷ್ಠಾನ ಏಜೆನ್ಸಿಗಳ ಮತ್ತು ಜನಪ್ರತಿನಿಧಿಗಳ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

ಇ) ಮೌಲ್ಯಮಾಪನದಿಂದ ಹೊರಹೊಮ್ಮುವ ಅಂಶಗಳೊಂದಿಗೆ ಸಮಾಜದ ವಿವಿಧ ವರ್ಗಗಳ ಅಭಿಪ್ರಾಯಗಳಂತೆ ಯೋಜನೆಗಳ ರೂಪುರೇಷೆಗಳನ್ನು ನಿರ್ಧರಿಸಲಾಗುವುದು. ಇದಲ್ಲದೆ ಕೆಲವಾರು ಯೋಜನೆಗಳ ಅನುಷ್ಠಾನಕ್ಕಾಗಿ ದೇಶದ/ಪ್ರಪಂಚದ ಇತರೆ ಭಾಗಗಳ ಯಶೋಗಾಥೆಗಳ ಅಧ್ಯಯನಕ್ಕಾಗಿ ಅಧಿಕಾರಿಗಳನ್ನು ಅಧ್ಯಯನ ಪ್ರವಾಸಕ್ಕೆ ನಿಯೋಜಿಸುತ್ತದೆ.

ಈ) ಯಾವುದೇ ನಿರ್ದಿಷ್ಟ ಯೋಜನೆಗಾಗಿ ಕಾಲಾವಧಿಯನ್ನು ನಿರ್ಧರಿಸಬಹುದು/ನಿರ್ಧರಿಸದೇ ಇರಬಹುದು. ಯೋಜನೆಯಿಂದ ಸಾಧಿಸಲಾದ ಫಲಶೃತಿಗಳ ವಿಶ್ಲೇಷಣೆಯ ಆಧಾರದ ಮೇಲೆ, ಹಾಲಿ ಇರುವ ಯೋಜನೆಯನ್ನು ಮತ್ತಷ್ಟು ಅವಧಿಗೆ ಮುಂದುವರೆಸುವ

ಅಥವಾ ಇದರ ಬದಲಿಗೆ ಹೊಸ ಯೋಜನೆಯನ್ನು ರೂಪಿಸುವ ಬಗ್ಗೆ ನಿರ್ಧರಿಸಲಾಗುವುದು.

ವಸತಿ ನಿಲಯಗಳು

2725 (3641); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸಗೂರು)

ಅ) ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಸ್ವಂತ ಕಟ್ಟಡ ಹೊಂದಿರುವ ವಸತಿ ನಿಲಯಗಳ ಸಂಖ್ಯೆ ಎಷ್ಟು ಹಾಗೂ ಬಾಡಿಗೆ ಆಧಾರದ ಮೇರೆಗೆ ಹೊಂದಿರುವ ವಸತಿ ನಿಲಯಗಳ ಸಂಖ್ಯೆ ಎಷ್ಟು;

ಆ) ವಸತಿ ನಿಲಯಗಳ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ವಸತಿ ನಿಲಯಗಳ ನಿರ್ಮಾಣಕ್ಕಾಗಿ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನ ಎಷ್ಟು (ಕ್ಷೇತ್ರವಾರು ವಿವರಗಳನ್ನು ನೀಡುವುದು)

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನಲ್ಲಿ 01 ಮೆಟ್ರಿಕ್ ಪೂರ್ವ ಹಾಗೂ 01 ಮೆಟ್ರಿಕ್ ನಂತರದ ಒಟ್ಟಾರೆ 02 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ.

1) ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಮಸ್ಕಿ

2) ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಲಿಂಗಸುಗೂರು.

ಆ) ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಲಿಂಗಸುಗೂರು ಇದಕ್ಕೆ ಲಿಂಗಸುಗೂರು ತಾಲ್ಲೂಕಿನ ಕರಡಕಲ್ ಗ್ರಾಮದ ಸರ್ಕಾರಿ ಗಾಯರಾಣ ಜಮೀನು ಸರ್ವೆ ನಂ:286 ರಲ್ಲಿ 2–00 ಎಕರೆ ನಿವೇಶನದಲ್ಲಿ ಸ್ವಂತ ಕಟ್ಟಡ ನಿರ್ಮಾಣ